# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 1662
ಸದಸ್ಯರ ಹೆಸರು : ಶ್ರೀ. ಎಂ.ಎ ಗೋಪಾಲಸ್ವಾಮಿ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ಸಚಿವರು : ಮಾನ್ಯ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು
ಉತ್ತರಿಸಬೇಕಾದ ದಿನಾಂಕ : 19-03-2021

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಫೆಬ್ರುವರಿ-2021ರ ಮಾಹೆಯಲ್ಲಿ ಅಕಾಲಿಕವಾಗಿ ಸುರಿದ ಭಾರಿ ಆಲಿಕಲ್ಲು ಮಳೆಗೆ ಹಾಸನ ಜಿಲ್ಲೆಯಲ್ಲಿ ಸಾವಿರಾರು ಹೆಕ್ಟೇರ್ ಪ್ರದೇಶದ ಕೃಷಿ ಬೆಳೆಗಳು ನಾಶವಾಗಿ ರೈತರು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ನಾಶವಾಗಿರುವ ಬೆಳೆಗಳ ಸಮೀಕ್ಷೆ ನಡೆಸಲಾಗಿದೆಯೇ.(ವಿವರ ನೀಡುವುದು)</td><td>ಫೆಬ್ರುವರಿ-2021ರ ಮಾಹೆಯಲ್ಲಿ ಅಕಾಲಿಕವಾಗಿ ಸುರಿದ ಭಾರಿ ಆಲಿಕಲ್ಲು ಮಳೆಗೆ ಹಾಸನ ಜಿಲ್ಲೆಯಲ್ಲಿ ಸಾವಿರಾರು ಹೆಕ್ಟೇರ್ ಪ್ರದೇಶದ ಕೃಷಿ ಬೆಳೆಗಳು ನಾಶವಾಗಿ ರೈತರು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br><br>ಆಲಿಕಲ್ಲು ಮಳೆಯಿಂದ ಬೆಳೆ ಹಾನಿಯಾಗಿರುವುದರ ಬಗ್ಗೆ ಕಂದಾಯ ಇಲಾಖೆ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳಿಂದ ಜಂಟಿ ಬೆಳೆಹಾನಿ ಸಮೀಕ್ಷೆಯನ್ನು ನಡೆಸಲಾಗಿರುತ್ತದೆ.<br><br>ಪ್ರಮುಖ ತೋಟಗಾರಿಕೆ ಬೆಳೆಗಳಾದ ಆಲೂಗಡ್ಡೆ, ಬಾಳೆ, ಕಾಳುಮೆಣಸು, ಅಡಿಕೆ ಮತ್ತು ಇತರೆ ತೋಟಗಾರಿಕೆ ಬೆಳೆಗಳ ಬೆಳೆಹಾನಿ ವರದಿಯನ್ನು ಕಂದಾಯ ಇಲಾಖೆಗೆ ಸಲ್ಲಿಸಲಾಗಿರುತ್ತದೆ.</td></tr>
<tr><td>ಆ)</td><td>ಈ ಆಲಿಕಲ್ಲು ಮಳೆಗೆ ಹಾಸನ ಜಿಲ್ಲೆಯಲ್ಲಿ ಯಾವ ಯಾವ ತೋಟಗಾರಿಕೆ ಬೆಳೆಗಳು ನಾಶವಾಗಿವೆ; ಇವುಗಳ ಪ್ರಮಾಣವೆಷ್ಟು; ನಷ್ಟದ ಅಂದಾಜು ಮೊತ್ತವೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)</td><td>ಆಲಿಕಲ್ಲು ಮಳೆಗೆ ಹಾಸನ ಜಿಲ್ಲೆಯಲ್ಲಿ ಹಾನಿಗೊಳಗಾದ ತೋಟಗಾರಿಕೆ ಬೆಳೆಗಳು, ಇವುಗಳ ಪ್ರಮಾಣ, ನಷ್ಟದ ಅಂದಾಜು ಮೊತ್ತದ ತಾಲೂಕುವಾರು ಮಾಹಿತಿ ಈ ಕೆಳಕಂಡಂತಿರುತ್ತದೆ.<br><table>
<tr><th rowspan="2">ಕ್ರ.ಸಂ</th><th rowspan="2">ಬೆಳೆ</th><th colspan="2">ಬೆಳೆಹಾನಿ ವಿಸ್ತೀರ್ಣ (ಹೆ.)</th></tr>
<tr><th>ಅರಕಲಗೂಡು</th><th>ಹೊಳೆನರಸಿಪುರ</th></tr>
<tr><td>1</td><td>ಆಲೂಗೆಡ್ಡೆ</td><td>2.00</td><td>0.00</td></tr>
<tr><td>2</td><td>ಬಾಳೆ</td><td>6.00</td><td>0.40</td></tr>
<tr><td>3</td><td>ಕರಿಮೆಣಸು</td><td>16.00</td><td>0.00</td></tr>
<tr><td>4</td><td>ಅಡಿಕೆ</td><td>5.00</td><td>0.00</td></tr>
<tr><td>5</td><td>ಮೆಣಸಿನ ಕಾಯಿ</td><td>48.00</td><td>0.00</td></tr>
<tr><td>6</td><td>ಎಲೆಕೋಸು</td><td>12.00</td><td>0.00</td></tr>
<tr><td>7</td><td>ಸೇವಂತಿಗೆ</td><td>2.00</td><td>0.00</td></tr>
</table></td></tr>
</table>

<table>
<tr><td></td><td></td><td>8</td><td>ಹಾಗಲಕಾಯಿ</td><td>0.00</td><td>0.40</td></tr>
<tr><td></td><td></td><td colspan="2">ಒಟ್ಟು</td><td>91.00</td><td>0.80</td></tr>
<tr><td></td><td></td><td colspan="2">ಬೆಳೆ ಹಾನಿಯ ಅಂದಾಜು ಮೊತ್ತ</td><td>64.92 ಲಕ್ಷ</td><td>0.58 ಲಕ್ಷ</td></tr>
<tr><td>ಇ)</td><td>ಈ ಮಳೆಯಿಂದ ಬೆಳೆ ನಷ್ಟ ಹೊಂದಿರುವ ರೈತರಿಗೆ ಪರಿಹಾರ ನೀಡಲು ಸರ್ಕಾರವು ಕ್ರಮಕೈಗೊಂಡಿದೆಯೇ;<br>ಕೈಗೊಂಡಿದ್ದಲ್ಲಿ, ಯಾವ ಯಾವ ಬೆಳೆಗಳಿಗೆ ಎಷ್ಟು ಪರಿಹಾರ ನೀಡಲಾಗುತ್ತಿದೆ? (ವಿವರ ನೀಡುವುದು)</td><td colspan="4">ಈ ಮಳೆಯಿಂದ ಬೆಳೆ ನಷ್ಟ ಹೊಂದಿರುವ ರೈತರಿಗೆ ಕಂದಾಯ ಇಲಾಖೆಯ ಮೂಲಕ ಪರಿಹಾರ ನೀಡಲು ಸರಕಾರದಿಂದ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ರಾಷ್ಟ್ರೀಯ/ರಾಜ್ಯ ವಿಪತ್ತು ಪರಿಹಾರ ನಿಧಿ ಮಾರ್ಗಸೂಚಿಯನ್ವಯ ಶೇ. 33 ಕ್ಕಿಂತ ಹೆಚ್ಚಿನ ಪ್ರಮಾಣದ ಬೆಳೆ ಹಾನಿಗೆ ಪ್ರತಿ ಹೆಕ್ಟೇರ್ ವಾರ್ಷಿಕ ಮಳೆಯಾಶ್ರಿತ ಬೆಳೆಗಳಿಗೆ ರೂ.6800/-, ವಾರ್ಷಿಕ ನೀರಾವರಿ ಬೆಳೆಗಳಿಗೆ ರೂ.13500/- ಮತ್ತು ಬಹುವಾರ್ಷಿಕ ಬೆಳೆಗಳಿಗೆ ರೂ.18000/- ರಂತೆ ಪ್ರತಿ ಫಲಾನುಭವಿಗೆ 2.00 ಹೆಕ್ಟೇರ್ ವರೆಗೆ ಪರಿಹಾರಧನ ವಿತರಿಸಲಾಗುತ್ತದೆ.</td></tr>
</table>

HORTI 184 HGM 2021

**(ಆರ್.ಶಂಕರ್)**

**ತೋಟಗಾರಿಕೆ ಮತ್ತು ರೇಷ್ಮೆ ಸಚಿವರು**